Regd No BG 155

28-9-1969

ಸ್ವರ್ಣಮಹೋತ್ಸವ ನೆರವೇರಿಸಿದ ಪತ್ರಿಕೆ ★ Golden Jubilee Celebrated Paper

SATYAVADI

Daily

HOSPORE 4

53 rd Year of Publication

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸರೋತ್ತವದ ಸತವಾದಿ

ಎ ಣ ಿ ಶೆ –

(ಎಂ. ಕೆ. ಮುಕುಂದರಾವ್)

' ಸತ್ಯವಾದಿ " ಸ್ವರ್ಣ ಮಹೋತ್ಸವ ಇಂದು : ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ || ಕೆ. ನಾಗಪ್ಪ ಆಳ್ವರವರ ಘನ ಅಧ್ಯಕ್ಷತೆಯಲ್ಲಿ : ಜನಪ್ರಿಯ ವ್ಯಕ್ತಿಗಳೂ, ದಕ್ಷರೂ ಆದ ಆಳ್ವರು ಸ್ವರ್ಣ ಮಹೋತ್ಸವದ ಅಧ್ಯಕ್ಷತೆ ವಹಿಸಿದ್ದು ನಮ್ಮ ಸೌಭಾಗ್ಯ. ಆ ಉದ್ದೇಶದಿಂದಲೇ ನಾವು ಸ್ವರ್ಣ ಮಹೋತ್ಸವವನ್ನು ಈ ವರೆಗೆ ಮುಂದೆ ಹಾಕಿದ್ದು.

" ಸತ್ಯವಾದಿ " ಈಗ 53 ನೇ ವರ್ಷದಲ್ಲಿದೆ. ನಾನಾ ಕಾರಣಗಳಿಂದ ಐವತ್ತು ವರ್ಷ ತುಂಬಿದೊಡನೆ ಸ್ವರ್ಣೋತ್ಸವ ನಡೆಸಲು ನಮಗೆ ಆಗಲಿಲ್ಲ. ಕಾಲ ಈಗ ಕೂಡಿ ಬಂತು. ಸ್ವರ್ಣೋತ್ಸವ ದೇವರ ಕೃಪೆಯಿಂದ ನೆರವೇರಿತು.

' ಸತ್ಯವಾದಿ ' ಸಂಸ್ಥಾಪನೆ ಆದುದು 1917. ನನ್ನ ತಾತನವರಾದ ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾಯರು ಪತ್ರಿಕೆಯ ಸಂಸ್ಥಾಪಕರು. ಅಂದಿನಿಂದಲೂ ನನ್ನ ತಂದೆಯವರಾದ ಧರ್ಮಪ್ರಚಾರ ನಿರತ ಶ್ರೀ ಎಂ. ಎಸ್.. ಕೃಷ್ಣರಾವ್ ರವರೇ ಸಂಪಾದಕರಾಗಿ ಮುಂದುವರಿಯುತ್ತಿರುವರು.

ವ್ಯಕ್ತಿಯೋರ್ವರು ಐವತ್ತು ವರ್ಷಗಳಿಗೆ ಮೇಲ್ಪಟ್ಟು ಪತ್ರಿಕಾ ಸಂಪಾದಕರಾಗಿ ನಡೆಸಿಕೊಂಡು ಬರುತ್ತಿರುವದು ಅಪೂರ್ವ. ಪತ್ರಿಕೆಯನ್ನು ನಡೆಸಿಕೊಂಡುಹೋಗುವುದು ಅತಿಕಷ್ಟವೆಂದು ಹೇಳಲೇಬೇಕಿಲ್ಲ. ದೇವರ ಕೃಪೆಯಿಂದ ಪತ್ರಿಕೆ ಇಷ್ಟು ವರ್ಷಗಳನ್ನು ದಾಟಿರುವುದು ಹರ್ಷದ ಸಂಗತಿ.

' ಸತ್ಯವಾದಿ " ತನ್ನದೇ ಆದ ಇತಿಹಾಸವಿದೆ. ಈ ಪತ್ರಿಕೆಯೊಡನೆ ಹುಟ್ಟಿದ, ಅನಂತರ ಹುಟ್ಟಿದ, ಎಷ್ಟೋ ಪತ್ರಿಕೆಗಳು ಅನಿವಾರ್ಯ ಕಾರಣಗಳಿಂದಾಗಿ ನಿಂತಿವೆ. ಆದರೆ ಎಂಥಾ ಬಿರುಗಾಳಿಗೆ ಸಹಾ ಅಳ್ಳಾಡದೇ ' ಸತ್ಯವಾದಿ ' ನಿಂತಿದೆ.

ಮೊದಲನೆ ಮಹಾಯುದ್ಧದ ಕಡೆಗಾಲದಲ್ಲಿ ' ಸತ್ಯವಾದಿ ' ಸ್ಥಾಪನೆಯಾಯಿತು. ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನದಲ್ಲಿ ಯಥಾಶಕ್ತಿ ಸೇವೆ ಸಲ್ಲಿಸಿತು.

ಆರಂಭದಲ್ಲಿ ಪತ್ರಿಕೆಗೆ ಸ್ವಂತ ಮುದ್ರಣಾಲಯವಿರಲಿಲ್ಲ. ರಾಯಲ್ ಪ್ರೆಸ್‌ನಲ್ಲಿ ಮುದ್ರಣ ಆರಂಭವಾಯಿತು. ಮರು ವರ್ಷ 1918 ರಲ್ಲಿ ಸ್ವಂತ ಮುದ್ರಣ ಸ್ಥಾಪನೆ ಆಯಿತು.

ಭಾರತ ಸ್ವಾತಂತ್ರ್ಯ, ಜವಾಬ್ದಾರಿ ಸರ್ಕಾರ ಸ್ಥಾಪನೆ, ಕರ್ನಾಟಕ ಏಕೀಕರಣಕ್ಕಾಗಿ ' ಸತ್ಯವಾದಿ ' ತನ್ನ ಪಾಲಿನ ಸೇವೆ ಸಲ್ಲಿಸಿದೆ.

1942ರ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು 1947 ರ ಮೈಸೂರಿನ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ತನ್ನ ಕರ್ತವ್ಯ ನಿರ್ವಹಣೆಯನ್ನು ' ಸತ್ಯವಾದಿ' ನೆರವೇರಿಸಿತು. (ಪತ್ರಿಕೆಯನ್ನು ತುಂಬಾ ಮೆಚ್ಚಿದವರ ಪೈಕಿ ಮಾಜಿ ಕಂದಾಯ ಮಂತ್ರಿ ದಿ || ಹೆಚ್. ಸಿದ್ದಯ್ಯನವರೂ ಒಬ್ಬರು.

1917 ರಲ್ಲಿ " ಸತ್ಯವಾದಿ " ಸ್ಥಾರಂಭವಾದಾಗ ಇದ್ದ ಪತ್ರಿಕೆಗಳಿಗೂ ಈಗ ಇರುವುದಕ್ಕೂ ಹೋಲಿಸಿದರೆ, ಪತ್ರಿಕೆಗಳ

— ಕಡೇ ಪುಟ ನೋಡಿ

ಸತ್ಯವಾಗಿ ಉಳಿದ " ಸತ್ಯವಾದಿ "

" ಕಂತಿ '

ಮಾನವನ ಉದಯ ಎಂದಾಯಿತೋ ಅದನ್ನು ಖಚಿತವಾಗಿ ಹೇಳಬಲ್ಲವರಾರು ? ಅಂದಿನಿಂದ ಇಂದಿನವರೆಗೆ ಮಾನವ ವೈಜ್ಞಾನಿಕವಾಗಿ, ಜ್ಞಾನಿಕನಾಗಿ ಎಷ್ಟುಬಾರಿ ಮುಂದಾಗಿ. ಮುನ್ನುಗ್ಗಿ, ಎಡವಿ, ಮುಗ್ಗರಿಸಿ, ನಾಶವಾಗಿ. ಮತ್ತೆಮತ್ತೆ ಅದೇ ಪರಿಪಾಟಕ್ಕೆ ಸಿಕ್ಕಿ ನರಳಿದನೋ ಅದನ್ನು ಖಚಿತಪಡಿಸಬಲ್ಲವರಾರು ? ಈ ಪ್ರವಾಹದಲ್ಲಿ ಪ್ರಚಾರವೂ ಒಂದು ಹನಿ.

ವಿಶ್ವ ಒಮ್ಮೆ ಹಿಗ್ಗುತ್ತೆ, ಮತ್ತೊಮ್ಮೆ ಕುಗ್ಗುತ್ತೆ. ಪ್ರಚಾರ – ಸಂಪರ್ಕ ಸಾಧನಗಳು ಬೆಳೆದಾಗ ವಿಶ್ವ ಒಂದೇ ಮನೆಯಾಗುವುದು, ಕುಗ್ಗುವುದು. ವ್ಯಕ್ತಿಗಳ ಆಗುಕುಗ್ಗು ಹೋಗುವರು. ವಿಶ್ವ ಹಿಗ್ಗಿದಾಗ ಮಾನವನೂ ಹಿರಿದಾಗುವನು. ಎದೆ ಆಗಲವಾಗುವುದು, ಬಾಹುಗಳೂ, ಪಾದವೂ, ವ್ಯಕ್ತಿತ್ವವೂ ಎತ್ತರವಾಗುವುದು. ಆಗ ಅವಸರ ಸಾಧನವೇ ಹೊರತು, ಆತನಿಗೆ ಯಾವ ಸಾಧನವೂ ಅಗತ್ಯವಿಲ್ಲ. ಅದೇ ಮಾನವತ್ವ. ಅಂದಿನ ಪ್ರಚಾರ ವಿಧಾನ ಯಜ್ಞ, ವೇದಿಕೆ, ತಿಳುವಳಿಕೆ ನೀಡಿಕೆ.

ನಡೆದು ಬಂದು, ಅನ್ನ ಉಂಡು, ಜ್ಞಾನ ಉಂಡು, ಮೆಲಕು ಹಾಕುತ್ತ ತೇರಳುವುದು.

ಕುಗ್ಗಿದ ವಿಶ್ವದಲ್ಲಿ ಚರ್ವಿತ ಚರ್ವಣ, ಅಜ್ಞಾನ, ದ್ವೇಷ, ಅಸೂಯೆ, ಪೈಪೋಟಿ, ಕಲಸುಮೇಲೋಗರ. ಅದೇ ಇಂದಿನ ಪತ್ರಿಕೆಗಳ, ಪ್ರಸಾರದ, ಬೆಳ್ಳಿ ತೆರೆಯ ಹಾವಳಿ. ವ್ಯಕ್ತಿ ಕುಗ್ಗಿದಂತೆಲ್ಲ ದುಷ್ಟ ಶಕ್ತಿ ಬೆಳೆಯುವುದು. ಅದೇ ಇಂದಾಗಿರುವುದು.

ಸತ್ಯವಾದಿ ಬೆಳದಷ್ಟೆ ಇದ್ದು, ಕುಗ್ಗದೆ ಬಾಳುತ್ತಾ ಬಂದಿದೆ. ಹಿಗ್ಗುವ, ಹಿಗ್ಗಿಸುವ ಕಾರ್ಯ ಇತರರದಾಗಿತ್ತು. ಅವರು ಅದನ್ನು ಮಾಡಿದ್ದರೆ, ಇಂದಿನ ಪ್ರಚಾರ ವೈಖರಿಗೆ ಸಿಕ್ಕಿ ಇದೂ ದುಷ್ಟ ಶಕ್ತಿ ಎನಿಸುತ್ತಿತ್ತು.

ಹಾಗಾಗದೆ ಕಿರಿದಾಗಿಯೇ ಉಳಿದು 50 ನ್ನು ದಾಟಿತು. ದುಷ್ಟ ವೃತ್ತಿಗಿಳಿಯಲಿಲ್ಲ. ಹೀಗಾಗಿ ನಾಡಿಗೆ ಉಪಕಾರ ಮಾಡಿತು.

ಕರ್ನಾಟಕದಲ್ಲಿ ಈ ಮಾತನ್ನು ಹೇಳಿಕೊಳ್ಳುವ ಶಕ್ತಿ ಮತ್ತಾವ ಪತ್ರಿಕೆಗೆ ಇದೆ? ತಿಳಿಸಬಲ್ಲವರು ತಿಳಿಸಿ

ಇದೇ ಸತ್ಯವಾಗಿ ಉಳಿದ ಸತ್ಯವಾದಿಯ ವ್ಯಕ್ತಿತ್ವ.

" ಸತ್ಯವಾದಿ " ಯ ಸ್ವರ್ಣೋತ್ಸವ

" ಸತ್ಯವಾದಿ " ಯ ಸ್ವರ್ಣ ಮಹೋತ್ಸವವು ಇಂದು ಯಶಸ್ವಿಯಾಗಿ ನೆರವೇರಿತು. ಸ್ವಾರ್ಥನಾನಂತ, ಸ್ವಾಗತ ಭಾಷಣವೂ, ಅನೇಕ ಮಹನೀಯರಿಂದ ಅಭಿನಂದನಾ ಭಾಷಣಗಳೂ, ಸಂದೇಶಗಳ ಓದುವಿಕೆಯೂ ಆದ ನಂತರ ಅಧ್ಯಕ್ಷತೆ ವಹಿಸಿದ್ದ ಡಾ|| ನಾಗಪ್ಪ ಆಳ್ವರವರ ಭಾಷಣಾನಂತರ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ, ಈ ಸಂತೋಷ ಸಮಾರಂಭವು ಸಮಾಪ್ತವಾಯಿತು.

"Bank Road Bahusar – A Fair Price Shop in Actual Practice"

(1)

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರ್ಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ಪರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರೆಗೆ ಹಚ್ಚಬಹುದು.
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ.
ದೀರ್ಘಕಾಲ ಬಾಳಿಕೆ ಬರುತ್ತವೆ.
ಒಂದು ಸುಧಾರಣೆ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ
ಪತ್ರ ವ್ಯವಹಾರ ಮಾಡಬಹುದು.

ಚರ್ಮದ ರಕ್ಷಣೆಗೆ
ಮೈಸೂರು ಗಂಧದ ಸಾಬೂನಿಗೆ
ಪ್ರತಿಯಾದುದು ಬೇರೆ ಇಲ್ಲ

ಈ ಸುಖ ಭೋಗದ ಅಲಂಕಾರಿಕ ಸಾಬೂನಿನಲ್ಲಿರುವ ಗಂಧದ ಎಣ್ಣೆ ನಿಮ್ಮ
ಚರ್ಮವನ್ನು ಆರೋಗ್ಯವಾಗಿಡುತ್ತದೆ ಮತ್ತು ತಾರುಣ್ಯದ ಲಕ್ಷಣವನ್ನು
ಕೊಡುತ್ತದೆ. ವಿವೇಚನೆಯುಳ್ಳವರಿಗೆ ವಿಶೇಷ ಲಕ್ಷಣವಾದ ಸಾಬೂನು.

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ

ಬೆಂಗಳೂರು-12

(5)

ಕುಟುಂಬ ಯೋಜನೆ ಎಂದರೇನು ?

ಕುಟುಂಬ ಯೋಜನೆ ಎಂದರೆ

★ ನಿಮಗೆ ಯಾವಾಗ ಮಕ್ಕಳಾಗಬೇಕು,
★ ಎಷ್ಟು ಮಕ್ಕಳಾಗಬೇಕು
ಎಂದು ನಿರ್ಧರಿಸುವುದು

ಎರಡು ಅಥವಾ ಮೂರು ಮಕ್ಕಳು ಮಾತ್ರ
ಒಂದೊಂದಕ್ಕೆ ಅಂತರ ಕನಿಷ್ಠ 3 ವರ್ಷ

★ ನಿಮ್ಮ ಹೆಂಡತಿಯ ಆರೋಗ್ಯ ರಕ್ಷಿಸುವುದು.
★ ನಿಮ್ಮ ಮಕ್ಕಳ ಆರೋಗ್ಯ, ಶಿಕ್ಷಣ ಮತ್ತು ಜೀವನಕ್ಕೆ ಬಗ್ಗೆ ಹೆಚ್ಚಿನ ಗಮನ ಕೊಡಲು ನಿಮಗೆ ಸಾಧ್ಯವಾಗುವುದು.

ಭಯ ಚಿಂತೆಗಳಿಲ್ಲದೆ ದಾಂಪತ್ಯ ಜೀವನದ ಸುಖವನ್ನು ಅನುಭವಿಸುವುದು.
ಕುಟುಂಬ ಯೋಜನೆ ಅನುಸರಿಸಲು ಹಲವು ವಿಧಾನಗಳಿವೆ.
ಯಾವ ವಿಧಾನವನ್ನಾದರೂ ನೀವು ಆರಿಸಿಕೊಳ್ಳಿ

○ ಉಚಿತ ಸಲಹೆ ಮತ್ತು ಸೇವೆ ಪಡೆಯಲು ನಿಮಗೆ ಸಮೀಪದಲ್ಲಿರುವ ಕುಟುಂಬ ಯೋಜನಾ ಕೇಂದ್ರವನ್ನು ಸಂದರ್ಶಿಸಿರಿ.

○ ಕುಟುಂಬ ಯೋಜನೆ ಪಡೆಯುವವರಿಗೆ ಸರ್ಕಾರದಿಂದ ಧನ ಸಹಾಯವೂ ಉಂಟು.

ಜನಾರೋಗ್ಯ ಇಲಾಖೆ
ಕುಟುಂಬ ಯೋಜನಾ ವಿಭಾಗ.

ಇಷ್ಟಪಟ್ಟಲ್ಲಿ ಮಕ್ಕಳು
ಕಷ್ಟವಾದಲ್ಲಿ ಬೇಡ

ಸಂತಾನ ನಿಯಂತ್ರಣ
ಸಂತೃಪ್ತಿ ಭೋಜನ

ಮಿತ ಸಂತಾನದಿಂದ
ಅಮಿತ ಆನಂದ
ಎರಡು ಅಥವಾ ಮೂರು ಮಕ್ಕಳು ಮಾತ್ರ ಸಾಕು
ಒಂದೊಂದಕ್ಕೆ ಅಂತರ ಕನಿಷ್ಠ 3 ವರ್ಷ.

ಸಂಖ್ಯೆ ಬೆಳೆದಿದೆ. ದೇವರ ದಯೆಯಿಂದ ಎಲ್ಲಾ ಪತ್ರಿಕೆಗಳೂ ಚೆನ್ನಾಗಿ ಬಾಳಲಿ.

" ಸತ್ಯವಾದಿ " ಸ್ವತಂತ್ರ ಮನೋಭಾವದ ಪತ್ರಿಕೆ. ಯಾವ ರಾಜಕೀಯ ಪಕ್ಷದ ಮುಖಪತ್ರವಲ್ಲ. ರಾಷ್ಟ್ರದ ಹಿತ ದೃಷ್ಟಿಯಿಂದ ಕೈಗೊಳ್ಳಬೇಕಾದ ರಚನಾತ್ಮಕ ಕಾರ್ಯಗಳನ್ನು ರೂಪಿಸುವುದರಲ್ಲಿ ಸಹಕರಿಸುವುದೇ ಪತ್ರಿಕೆಯ ಗುರಿ.

1945. ಶ್ರೀ ಕೆಂಗಲ್ ಹನುಮಂತಯ್ಯನವರು ಪ್ರಜಾಪ್ರತಿನಿಧಿಸಭೆಯ ಕಾಂಗ್ರೆಸ್ ಪಕ್ಷದ ನಾಯಕರು. 'ಜನವಾಣಿ" ಸಚೇರಿಯ ಮುಂದೆ ನಮ್ಮ ಪ್ರತಿನಿಧಿ ಬರುತ್ತಿದ್ದರು. ಆಗ ಶ್ರೀ ಕೆಂಗಲ್‌ರವರು ನಮ್ಮ ಪ್ರತಿನಿಧಿಯನ್ನು ಕರೆದು ಡಾ|| ಟಿ. ಸಿ. ಎಂ. ರಾಯ್ಕರಿಗೆ ಉತ್ತರ ನೀಡಿದ್ದು ಕೇಳಿತೇ ಎಂದರು. ಏನು ? ಎಸ್ಸಲು ಸಭಾಧ್ಯಕ್ಷತೆ ವಹಿಸಿದ ರಾಯ್ಕರ್ 'ಹೌಸ್ ಈಸ್ ಡಿಸಾಲ್ವ್ಡ್ " ಎಂದರು, ನಾನು ಮಿನಿಸ್ಟ್ರಿ ಈಸ್ ಡಿಸಾಲ್ವ್ಡ್ ' ಎಂದೆ ಎಂದರು.

1945. ಪ್ರಜಾ ಪ್ರತಿನಿಧಿ ಸಭೆ: ಕುದೇರು ವೀರಣ್ಣನವರು ಮತ್ತು ಪಾವಗಡ ನಂಜುಂಡಾವ್‌ರವರು ಪತ್ರಿಕೆಯವರನ್ನು ನಿಂದಿಸಿದರೆಂದು ನಡೆದ ಪತ್ರಿಕಾ ಸಭಾ ಪತ್ರಿಕಾ ಸಭಾ ಪರಿತ್ಯಾಗದಲ್ಲಿ 'ಸತ್ಯವಾದಿ' ಭಾಗವಹಿಸಿತು.

1947. ಜನವಾಬ್ದಾರಿ ಸರ್ಕಾರದ ಹೋರಾಟ ಆರಂಭವಾಗಿರಲಿಲ್ಲ ; ಕೆಂಗಲ್ ಹನುಮಂತಯ್ಯನವರು ಜೈಲಿನಲ್ಲಿದ್ದರು : ಶ್ರೀ ಶಾಮರಾಜ ಅಯ್ಯಂಗಾರ್ಯರು ಪ್ರಜಾ ಪ್ರತಿನಿಧಿಸಭೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ನಮ್ಮ ಪ್ರತಿನಿಧಿ ಹೋದಾಗ " ನೀವು ಸಿ ಐ ಡಿ ", ಇಲ್ಲೀಂದ ಹೋಗಿರಿ, ಎಂದರು : " ನಾನು ಸಿ ಐ ಡಿ ಅಲ್ಲ, " ಸತ್ಯವಾದಿ ' ಯ ಪ್ರತಿನಿಧಿ ಎಂದರೂ ಅವರು ಕೇಳಲಿಲ್ಲ : ಮಾರನೇ ದಿನ

ತಾತಯ್ಯ – ಸತ್ಯವಾದಿ

★

ಶ್ರೀ ಎಂ. ವೆಂಕಟಕೃಷ್ಣಯ್ಯ ಅರ್ಥಾತ್ ತಾತಯ್ಯನವರಿಗೂ 'ಸತ್ಯವಾದಿ' ಗೂ ನಿಕಟ ಸಂಬಂಧವಿತ್ತು. " ಸತ್ಯವಾದಿ ' ಎಂದರೆ ಅವರಿಗೆ ತುಂಬಾ ಪ್ರೀತಿ ಇತ್ತು.

ನಮ್ಮ ಮೇಲೆ ತುಂಬಾ ಅಭಿಮಾನ ವಿಟ್ಟು ಮುದ್ರಣ ಯಂತ್ರವೊಂದನ್ನು ರಿಯಾಯಿತಿ ದರದಲ್ಲಿ ನೀಡಿದರು. ಅವರಿಗೆ ಮರಿಮಲ್ಲಪ್ಪ ಸ್ಕೂಲಿನಿಂದ ದೊರೆಯುತ್ತಿದ್ದ ವಿರಾಮ ವೇತನ ಅವರ ರಾಜಕೀಯ ಚಟುವಟಿಕೆಗಾಗಿ ನಿಲ್ಲಿಸಲ್ಪಟ್ಟಾಗ ಈ ಬ ' ಸತ್ಯವಾದಿ " ಲೇಖನಗಳು ಪ್ರಕಟಿಸಲಾಯಿತು. ಮತ್ತೆ ಅವರಿಗೆ ವಿರಾಮ ವೇತನ ದೊರೆತಾಗ ಸಂತೋಷಿಸಿದ ಅವರು, ಪತ್ರಿಕೆಯನ್ನು ಆಶೀರ್ವದಿಸಿ ರೂ 50 ಇತ್ತರು.

' ಸತ್ಯವಾದಿ ' ಸಂಪಾದಕರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಬ್ಬರ ಮೇಲೆ ಹಾಕಿದ್ದ ಡಿಫಮೇರ್ಷ ಮೊಕದ್ದಮೆಯಲ್ಲಿ ಅವರು ಸಂಪಾದಕರ ಪರ ಸಾಕ್ಷ್ಯ ನುಡಿದರು

ಸಭೆ ಜಹಾಜ್ಕೆ ಎದ್ದಾಗ ಪುಟ್ಟಣ್ಣ ಚಿಟ್ಟರ ಪುರಭವನದ ಹೊರಗೆ ನಿಂತಿದ್ದ ನಮ್ಮ ಪ್ರತಿನಿಧಿಯ-ಕ್ಷಮೆ ಕೋರಿ ದೊಡ್ಡ ಗುಣ ವ್ಯಕ್ತಪಡಿಸಿದರು

1948 : ಪ್ರಜಾಪ್ರತಿನಿಧಿಸಭೆಗೆ ಪ್ರವೇಶದ ಅವಕಾಶ ಕೊಡಲು ಪತ್ರಿಕಾ ಗ್ಯಾಲರಿ ನೇಮಕವಾಗಿತ್ತು : ಕಾನೂನು ಮಂತ್ರಿ ಅದರ ಅಧ್ಯಕ್ಷರು ; ಕೇವಲ ಬೆಂಗಳೂರು ಪತ್ರಿಕೆಯವರೇ ಅದರ ಸದಸ್ಯರು (ಆಗ ಸದಸ್ಯರಾಗಿದ್ದವರು ಈಗ ಪತ್ರಿಕಾ ಕ್ಷೇತ್ರದಲ್ಲೇ ಇಲ್ಲ !) ಸತ್ಯವಾದಿಗೆ ಪ್ರವೇಶಾವಕಾಶ ತಪ್ಪಿಸಿದರು; ಮೈಸೂರಿನ 'ವಿಜಯ' ಪ್ರತಿಭಟಿಸಿತು : " ಸತ್ಯವಾದಿ " ತೀವ್ರವಾಗಿ ಪ್ರತಿಭಟಿಸಿತು ; ಕೂಡಲೇ ' ಸತ್ಯವಾದಿ ' ಗೆ ಪ್ರವೇಶ ದೊರೆಯಿತು.

ಮೊದಲನೆಯ ಪುಟದಲ್ಲಿ ಕಂಡ ನಾಮಧೇಯದಲ್ಲಿ ಲೇಖನ ಬರೆದಿರುವವರು ಶ್ರೀ ಎಸ್ ಶ್ರೀಕಂಠಯ್ಯನವರು ಮೈಸೂರು ನಗರದಲ್ಲಿ ಸಿಂಹನಾದ, ವದಂತಿ ನಡೆಸಿದ ಕೀರ್ತಿ ಅವರದು ವರ್ತಮಾನ್ ಸ್ಥಾಪನೆ ಆದಾಗ ಅವರು ಅದರ ಸಂಪಾದಕರು ಅನಂತರ ಬೆಂಗಳೂರಿನ ಪ್ರಜಾವಾಣಿ ಸೇರಿದರು. ಸತ್ಯವಾದಿ ಎಂದರೆ ಅವರಿಗೆ ತುಂಬಾ ಅಭಿಮಾನ

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

— ಆತ್ಯಾಕರ್ಷಣೀಯ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಈ ದಿವಸ

.... ಚಿತ್ರೋತ್ಕರ್ಷ ಹಿಂದಿ ಚಿತ್ರ ....

ಮಾಧವಿ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S Krishna Rao (Proprietor) at the Satyavadi Press Chamarajapuram, Mysore